**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಜೇವರ್ಗಿ**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆಃ 179/2023**

**ಚಾ.ಸಾ - 1**

**ಪ್ರಾ.ಸಾ - 3**

**ಸಾಕ್ಷಿಗೆ ದಿನಾಂಕ 16-07-2026ರಂದು ಪ್ರಮಾಣ ವಚನ ಬೋಧಿಸಲಾಯಿತು**

| | | |
|---|---|---|
| ಸಾಕ್ಷಿಯ ಹೆಸರು | ಃ | ಶಿವರಾಜ |
| ತಂದೆಯ ಹೆಸರು | ಃ | ಅಮರಪ್ಪಗೌಡ |
| ವಯಸ್ಸು | ಃ | 46 ವರ್ಷ |
| ಉದ್ಯೋಗ | ಃ | ಆರಕ್ಷಕ ಉಪ-ನಿರೀಕ್ಷಕರು, ಗೋಗಿ ಪೊಲೀಸ್ ಠಾಣೆ |
| ವಾಸಸ್ಥಳ | ಃ | ಗೋಗಿ ತಾಃ ಶಹಾಪುರ |

**ಮುಖ್ಯವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದ:**

ನಾನು ಜನೆವರಿ-2023 ರಿಂದ ಜೂನ್-2023ರವರೆಗೆ ಜೇವರ್ಗಿ ಪೋಲಿಸ ಠಾಣೆಯಲ್ಲಿ ಆರಕ್ಷಕ ಉಪ-ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 10-05-2023ರಂದು ನಾನು ಠಾಣೆಯಲ್ಲಿದ್ದಾಗ ರಾತ್ರಿ 1 ಗಂಟೆಗೆ ಒಂದು ಮಾಹಿತಿ ಬಂದ ಪ್ರಕಾರ ಕೂಡಿ ದರ್ಗಾದ ಕ್ರಾಸ್ ಹತ್ತಿರ ಇಬ್ಬರು ವ್ಯಕ್ತಿಗಳು ಮದ್ಯ ಮಾರಾಟ ಮಾಡಲು ಮದ್ಯ ತೆಗೆದುಕೊಂಡು ಹೋಗುತ್ತಿದ್ದಾರೆ ಎಂದು ಬಾತ್ಮಿ ಬಂದ ಮೇರೆಗೆ ನಮ್ಮ ಠಾಣೆಯಲ್ಲಿ ಇದ್ದಂತಹ ಚಾಸಾ-4 ಮತ್ತು ಇಬ್ಬರು ಪಂಚರಾದ ಚಾಸಾ-2 ಮತ್ತು 3 ರವರನ್ನು ಬರಮಾಡಿಕೊಂಡು ಅವರಿಗೆ ಬಾತ್ಮಿ ಬಂದ ವಿಷಯ ತಿಳಿಸಿದಾಗ ಅವರು ಪಂಚರಾಗಲು ಒಪ್ಪಿಕೊಂಡಿರುತ್ತಾರೆ.

ರಾತ್ರಿ 1-30 ಗಂಟೆಗೆ ನಮ್ಮ ಠಾಣಾ ಜೀಪ್ ನಂ.ಕೆಎ-32 ಜಿ-698ನೇದ್ದರಲ್ಲಿ ದಾಳಿ ಮಾಡಲು ಹೋದೆವು. 2-30 ಗಂಟೆ ಸುಮಾರಿಗೆ ಕೂಡಿ ದರ್ಗಾದ ಹತ್ತಿರ ಹೋಗಿ ಹೋಟೆಲ್ ಮರೆಯಲ್ಲಿ ನಿಂತು ನೋಡಲಾಗಿ ಅಲ್ಲಿ ಇಬ್ಬರು ವ್ಯಕ್ತಿಗಳು ನಿಂತಿದ್ದು ರಾತ್ರಿ 2-35 ಗಂಟೆಗೆ ಪಂಚರ ಸಮಕ್ಷಮ ದಾಳಿ ಮಾಡಿದೆವು. ಅಲ್ಲಿದ್ದಂತಹ ಇಬ್ಬರು ವ್ಯಕ್ತಿಗಳು ಓಡಿಹೋಗಲು ಪ್ರಯತ್ನಪಟ್ಟರೂ ನಾವು ಅವರನ್ನು ಹಿಡಿದು ವಿಚಾರಿಸಿದಾಗ ಅವರಲ್ಲಿ ಒಬ್ಬ ವ್ಯಕ್ತಿ ಜಗನ್ನಾಥ ಇನ್ನೊಬ್ಬನ ಹೆಸರು ಶೇಖ್ ಫರೀದ್ ಎಂದು ತಿಳಿಸಿದರು.

ಜಗನ್ನಾಥನ ಹತ್ತಿರ ಇರುವಂತಹ ಮದ್ಯದ ಬಗ್ಗೆ ವಿಚಾರಿಸಿದಾಗ ಆತನು ಯಾವುದೇ ಲೆಸೆನ್ಸ್ ಇಲ್ಲ

ಎಂದು ತಿಳಿಸಿದನು. ಆತನ ಹತ್ತಿರ ಇದ್ದಂತಹ ಮುದ್ದೆಮಾಲುಗಳನ್ನು ಪರಿಶೀಲಿಸಲಾಗಿ 90 ಎಂ.ಎಲ್- ನ 96 ಓರಿಜಿನಲ್ ಚಾಯ್ಸ್ ಡೀಲಕ್ಸ್ ವಿಸ್ಕಿಯ ಪೌಚುಗಳು ಮತ್ತು ಆತನ ಅಂಗಶೋಧನೆ ಮಾಡಲಾಗಿ ರೂ.10,150/- ಇದ್ದವು.

ಶೇಖ್ ಫರೀದನ ಹತ್ತಿರ ಇರುವಂತಹ ಮದ್ಯದ ಬಗ್ಗೆ ವಿಚಾರಿಸಿದಾಗ ಆತನು ಯಾವುದೇ ಲೆಸೆನ್ಸ್ ಇಲ್ಲ ಎಂದು ತಿಳಿಸಿದನು. ಆತನ ಹತ್ತಿರ ಇದ್ದಂತಹ ಮುದ್ದೆಮಾಲುಗಳನ್ನು ಪರಿಶೀಲಿಸಲಾಗಿ 90 ಎಂ.ಎಲ್-ನ 28 ಓರಿಜಿನಲ್ ಚಾಯ್ಸ್ ಡೀಲಕ್ಸ್ ವಿಸ್ಕಿಯ ಪೌಚುಗಳು ಮತ್ತು ಆತನ ಅಂಗಶೋಧನೆ ಮಾಡಲಾಗಿ ರೂ.8,650/- ಇದ್ದವು.

ಸದರಿ ಹಣದ ಬಗ್ಗೆ ವಿಚಾರಣೆ ಮಾಡಿದಾಗ ಸದರಿ ಹಣವು ಮದ್ಯ ಮಾರಾಟ ಮಾಡಿ ಬಂದಂತಹ ಹಣ ಎಂದು ತಿಳಿಸಿರುತ್ತಾರೆ.

ಘಟನಾ ಸ್ಥಳದಲ್ಲಿ ರಾತ್ರಿ 2-35 ರಿಂದ 3-35ವರೆಗೆ ಪಂಚನಾಮೆ ಮಾಡಿರುತ್ತೇವೆ. ಮುದ್ದೆಮಾಲು, ಹಣ ವಶಕ್ಕೆ ಪಡೆದುಕೊಂಡು ಬಿಳಿ ಬಟ್ಟೆಯಲ್ಲಿ ಹೊಲಿದು ಅದರ ಮೇಲೆ 'ಎ' ಎಂಬ ಅಕ್ಷರದಿಂದ ಸೀಲ್ ಮಾಡಲಾಯಿತು.

ಆರೋಪಿತರೊಂದಿಗೆ ಬೆಳಿಗ್ಗೆ 4-30 ಗಂಟೆಗೆ ಠಾಣೆಗೆ ಹಾಜರಾಗಿ ವರದಿ ನೀಡಿರುತ್ತೇನೆ.

ಸಾಕ್ಷಿಗೆ ನಿಪಿ-2 ದೂರನ್ನು ತೋರಿಸಲಾಗಿ ಅದರ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ನಿಪಿ-1 ಜಪ್ತಿಪಂಚನಾಮೆಯನ್ನು ತೋರಿಸಲಾಗಿ ಅದರ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಸಹಿಯನ್ನು ನಿಪಿ-1(ಬಿ) ಗುರುತಿಸಲಾಯಿತು.

ಸಾಕ್ಷಿಗೆ ನ್ಯಾಯಾಲಯದ ಮುಂದಿರುವ ಮು.ಮಾ-1 ರಿಂದ 124 ಮದ್ಯದ ಪೌಚುಗಳನ್ನು ಪೌಚುಗಳನ್ನು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟಿ ಸವಾಲುಃ ಆರೋಪಿತರ ಪರ ಶ್ರೀ ಎಂ.ಎಸ್.ಪಿ. ವಕೀಲರಿಂದಃ</u>**

ಆ ದಿನ ಪಂಚರನ್ನು ಚಾಸಾ-4ರವರು ಕರೆದುಕೊಂಡು ಬಂದಿರುತ್ತಾರೆ. ಬಾತ್ಮಿ 1 ಗಂಟೆಗೆ ಬಂದಿರುತ್ತದೆ. ಜೇವರ್ಗಿ ಠಾಣೆಯಿಂದ ಘಟನಾ ಸ್ಥಳ 20 ಕಿ.ಮೀ. ದೂರ ಆಗುತ್ತದೆ. ನೀವು ಆರೋಪಿತರನ್ನು ನೋಡಿದಾಗ ಅವರಿಂದ ಮದ್ಯವನ್ನು ಖರೀದಿ ಮಾಡುವವರು ಇದ್ದರಾ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ. ಆ ಸಮಯದಲ್ಲಿ ಗ್ರಾಮ ಪಂಚಾಯತಿ ಎಲೆಕ್ಷನ್ ಇತ್ತು ಎಂದರೆ ಎಂ.ಎಲ್.ಎ. ಚುನಾವಣೆ ಇತ್ತು ಎಂದು ಉತ್ತರಿಸುತ್ತಾರೆ. ಆ ಸಮಯದಲ್ಲಿ ಆರೋಪಿತರನ್ನು ಬಿಟ್ಟು ಬೇರೆ ಸಾರ್ವಜನಿಕರು ಎಷ್ಟು ಜನರು ಇದ್ದರು ಎಂದರೆ ಯಾರು ಇದ್ದಿದ್ದಿಲ್ಲ ಎಂದು ಉತ್ತರಿಸುತ್ತಾರೆ.

ಪಂಚನಾದ ಚಾಸಾ-2ರವರು ಜೇವರ್ಗಿ ಪೊಲೀಸ್ ಠಾಣೆಯಲ್ಲಿ ಕೆಲಸ ಮಾಡುತ್ತಾರೆ ಎಂದರೆ ಇಲ್ಲ

ಎಂದು ಉತ್ತರಿಸುತ್ತಾರೆ. ಪಂಚನಾದ ಚಾಸಾ-3 ರವರು ಸಹ ಜೇವರ್ಗಿ ಪೊಲೀಸ್ ಠಾಣೆಯಲ್ಲಿ ಮೆಕ್ಯಾನಿಕ್ ಇದ್ದಾನೆ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ. ನೀವು ಆರೋಪಿತರಿಂದ ಯಾವುದೇ ಮುದ್ದೆಮಾಲುಗಳನ್ನು ಜಪ್ತಿಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನೀವು ಘಟನಾ ಸ್ಥಳಕ್ಕೆ ಹೋಗಿಲ್ಲದಿದ್ದರೂ ಸಹ ಪೊಲೀಸ್ ಠಾಣೆಯಲ್ಲೇ ಕುಳಿತು ವರದಿಯನ್ನು ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ಎಲ್ಲಾ ದಾಖಲಾತಿಗಳನ್ನು ಸೃಷ್ಠಿ ಮಾಡಿ ಆರೋಪಿತರ ವಿರುದ್ಧ ಸುಳ್ಳು ವರದಿ ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ.

ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತುಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೆ.ಸರಿ ಅದೆ.

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂಡಾಧಿಕಾರಿಗಳು ಜೇವರಗಿ

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಜೇವರಗಿ.**

**<u>ಕ್ರಿಮಿನಲ್ ಮೊಕದ್ದಮೆ ಸಂಖ್ಯೆಃ 179/2023</u>**

**ಚಾ.ಸಾ-3**

**ಪ್ರಾ.ಸಾ-4**

**ಸಾಕ್ಷಿಗೆ ದಿನಾಂಕ 16-07-2026ರಂದು ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | ಃ | ಅನ್ವರ್ ಪಾಶಾ |
| ತಂದೆಯ ಹೆಸರು | ಃ | ನಜೀರ |
| ವಯಸ್ಸು | ಃ | 50 ವರ್ಷ |
| ಉದ್ಯೋಗ | ಃ | ಮೆಕ್ಯಾನಿಕ್ |
| ವಾಸಸ್ಥಳ | ಃ | ಜೇವರ್ಗಿ |

**<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದ</u>**

ನ್ಯಾಯಲಯದ ಮುಂದಿರುವ ಆರೋಪಿತರು ನನಗೆ ಗೊತ್ತಿಲ್ಲ. ಚಾಸಾ-1 ಮತ್ತು 2 ನನಗೆ ಗೊತ್ತಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಪೊಲೀಸರು ನನ್ನ ಮತ್ತು ಚಾಸಾ-2ರವರ ಸಮಕ್ಷಮ ಪಂಚನಾಮೆ ಮಾಡಿಲ್ಲ ಮತ್ತು ಯಾವುದೇ ಮದ್ಯದ ಪೌಚುಗಳನ್ನು ಜಪ್ತಿಪಡಿಸಿಕೊಂಡಿಲ್ಲ.

ಸಾಕ್ಷಿಗೆ ನಿಪಿ-1 ಜಪ್ತಿ ಪಂಚನಾಮೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಸಹಿಯನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಪೊಲೀಸ್ ಠಾಣೆಯಲ್ಲಿ 3 ವರ್ಷಗಳ ಹಿಂದೆ ಮಾಡಿರುತ್ತೇನೆ. ಪಂಚನಾಮೆಯಲ್ಲಿ ಬರೆದಿರುವ ವಿಚಾರ ಗೊತ್ತಿಲ್ಲ.

(ಮಾನ್ಯ ಸ.ಸ.ಅ ರವರು ಸಾಕ್ಷಿ ಪ್ರತಿಕೂಲವಾಗಿ ಸಾಕ್ಷಿ ನುಡಿದಿದ್ದಾರೆ ಹಾಗಾಗಿ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಘೋಷಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಕೋರಿದ್ದು, ಮುಖ್ಯ ವಿಚಾರಣೆಯಲ್ಲಿ ಸಾಕ್ಷಿ ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರೀಕ್ತವಾಗಿ ಸಾಕ್ಷ್ಯ ನುಡಿದಿರುವುದು ಮೇಲ್ನೋಟಕ್ಕೆ ಕಂಡುಬಂದಿರುವ ಕಾರಣ ಮಾನ್ಯ ಅಭಿಯೋಜನೆಯವರಿಗೆ ಪಾಟೀಸವಾಲು ಮಾಡಲು ಅನುಮತಿಸಲಾಯಿತು)

**<u>ಪಾಟೀ ಸವಾಲುಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದ</u>**

ದಿಃ 10-05-2023 ರಂದು ರಾತ್ರಿ 2-35 ರಿಂದ 3-35 ಗಂಟೆ ಸಮಯದಲ್ಲಿ ಪೊಲೀಸರು ಗುನ್ನ ಸ್ಥ..ಳದಲ್ಲಿ ನಿಮ್ಮ ಮತ್ತು ಚಾಸಾ-2ರವರ ಸಮಕ್ಷಮ ನಿಪಿ-1ರಂತೆ ಪಂಚನಾಮೆಯನ್ನು ಮಾಡಿ

ಮುದ್ದೆಮಾಲು ನಂ.1 ರಿಂದ 124 ಮದ್ಯದ ಪೌಚುಗಳನ್ನು ಹಾಗೂ ರೂ.10850/- ಮತ್ತು ರೂ.8650/- ಹಣವನ್ನು ಜಪ್ತಿಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪಂಚನಾಮೆಯನ್ನು ಆರೋಪಿತರು ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿರುವ ವಿಚಾರವಾಗಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಮಗೆ ಈ ಪ್ರಕರಣದ ಎಲ್ಲ ವಿಚಾರಗಳು ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲೆಂದು ಈ ರೀತಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಆರೋಪಿತರ ಪರ ವಕೀಲರಿಂದ ಪಾಟೀ ಸವಾಲು ಇರುವುದಿಲ್ಲ.**

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತುಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೆ.ಸರಿ ಅದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂಡಾಧಿಕಾರಿಗಳು ಜೇವರಗಿ